# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1084(1044) |
| ಸದಸ್ಯರ ಹೆಸರು | : | ಶ್ರೀ ಕುಶಾಲಪ್ಪ ಎಂ.ಪಿ (ಸುಜಾ)(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 17.03.2025 |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬೋಧಕೇತರ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಜೇಷ್ಠತಾ ಪಟ್ಟಿಯನ್ನು ಸಮಯೋಚಿತವಾಗಿ ಪ್ರಕಟಿಸುವಲ್ಲಿ ಮತ್ತು ಮುಂಬಡ್ತಿ ನೀಡುವಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಯಾವ ನಿಯಮಗಳ ಆಧಾರದಲ್ಲಿ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗುತ್ತದೆ ಮತ್ತು ಮುಂಬಡ್ತಿ ನೀಡಲಾಗುತ್ತಿದೆ; (ಅವುಗಳ ಆದೇಶದ ಪ್ರತಿಗಳನ್ನು ನೀಡುವುದು) | ಶಾಲಾ ಶಿಕ್ಷಣ ಇಲಾಖೆಯ ಬೆಂಗಳೂರು, ಕಲಬುರಗಿ ಮತ್ತು ಧಾರವಾಡ ಆಯುಕ್ತಾಲಯಗಳ ವ್ಯಾಪ್ತಿಯಲ್ಲಿ ನಿಯಮಾನುಸಾರ ಕಾಲಕಾಲಕ್ಕೆ ಜೇಷ್ಠತಾ ಪಟ್ಟಿಗಳನ್ನು ಪ್ರಕಟಿಸಲಾಗುತ್ತಿದ್ದು, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಅಧಿಕೃತ ಜ್ಞಾಪನ ಸಂಖ್ಯೆ:ಸಿಆಸುಇ 106 ಸೇನೇನಿ 2021, ದಿನಾಂಕ:10.12.2021 ರನ್ವಯ ರಿಕ್ತ ಸ್ಥಾನ ಆಧಾರಿತ ಬದಲಾಗಿ ಹುದ್ದೆ ಆಧಾರಿತ ವರ್ಗೀಕರಣದ ನಿಯಮದಂತೆ ಬಡ್ತಿ ಅನುಪಾತದ ಹುದ್ದೆಗಳನ್ನು ಪರಿಗಣಿಸಿ ಬಡ್ತಿಗಳನ್ನು ನೀಡಲಾಗುತ್ತಿದೆ. 2024ನೇ ಸಾಲಿನಲ್ಲಿ ನೀಡಲಾಗಿರುವ ಮುಂಬಡ್ತಿ ಆದೇಶಗಳು ಇಲಾಖಾ ವೆಬ್ ಸೈಟ್ ನಲ್ಲಿ (http://schooleducation.karnataka.gov.in, http://cpikalaburgi.karnataka.gov.in, http://cpidharwad.karnataka.gov.in) ಪ್ರಕಟಿಸಲಾಗಿದೆ.<br><br>ಪ್ರಸ್ತುತ ದಿನಾಂಕ:01.01.2025 ರಲ್ಲಿದ್ದಂತೆ ತಾತ್ಕಾಲಿಕ ಜೇಷ್ಠತಾ ಪಟ್ಟಿಗಳನ್ನು ಪ್ರಕಟಿಸಲಾಗಿದ್ದು, ಆಕ್ಷೇಪಣಾ ಅವಧಿ ಮುಗಿದ ನಂತರ ಜೇಷ್ಠತಾ ಪಟ್ಟಿಗಳನ್ನು ಅಂತಿಮಗೊಳಿಸಲಾಗುವುದು. ತದನಂತರ ನಿಯಮಾನುಸಾರ ಮುಂಬಡ್ತಿ ಕುರಿತಂತೆ ಕ್ರಮವಹಿಸಲಾಗುವುದು. |
| ಆ) | ಸರ್ಕಾರದ ಆದೇಶ ಸಂ: ಸಿಆಸುಇ 106 ಸೇನೇನಿ 2021, ದಿನಾಂಕ:10.12.2021ರ ಆದೇಶದ ಅನ್ವಯ ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳನ್ನು ಭರ್ತಿ ಮಾಡುವಾಗ ರಿಕ್ತ ಸ್ಥಾನ ಆಧಾರಿತ ವರ್ಗೀಕರಣದ ಬದಲಾಗಿ ಹುದ್ದೆ ಆಧಾರಿತ | ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 106 ಸೇನೇನಿ 2021, ದಿನಾಂಕ:10.12.2021ರನ್ವಯ ಶಾಲಾ ಶಿಕ್ಷಣ ಇಲಾಖೆಯ ಬೆಂಗಳೂರು ಆಯುಕ್ತಾಲಯ, ಧಾರವಾಡ ಆಯುಕ್ತಾಲಯ ಮತ್ತು ಕಲಬುರಗಿ ಆಯುಕ್ತಾಲಯದ ವ್ಯಾಪ್ತಿಯಲ್ಲಿ ಹುದ್ದೆ ಆಧಾರಿತ ವರ್ಗೀಕರಣದ ಮುಖಾಂತರವೇ ಖಾಲಿ ಹುದ್ದೆ ಭರ್ತಿ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿರುತ್ತದೆ. ಸದರಿ |

| | | |
|---|---|---|
| | ವರ್ಗೀಕರಣವನ್ನು ಮಾಡಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಈ ಆದೇಶವನ್ನು ಶಾಲಾ ಶಿಕ್ಷಣ ಇಲಾಖೆಯಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆಯೇ; (ಮಾಹಿತಿ ನೀಡುವುದು) | ಆದೇಶವನ್ನು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಗೊಳಿಸಲು ಕ್ರಮವಹಿಸಲಾಗುತ್ತಿದೆ. |
| ಇ) | ಸದರಿ ಆದೇಶದೊಂದಿಗೆ ನೀಡಲಾದ ಅನುಬಂಧಗಳನ್ವಯ ಹಾಗೂ ದಿನಾಂಕ:19/11/2024ರಂದು ಸಿ.ಆ.ಸು. ಇಲಾಖೆಯ ಸೂಚನೆಗಳನ್ವಯ ದಿನಾಂಕ:01.01.2025ಕ್ಕೆ ಜೇಷ್ಠತಾ ಪಟ್ಟಿಗಳನ್ನು ಪ್ರಕಟಿಸುವ ಕುರಿತು ಕೈಗೊಂಡಿರುವ ಕ್ರಮಗಳೇನು; | ಸರ್ಕಾರದ ಆದೇಶದಂತೆ ದಿನಾಂಕ: 01.01.2024ರಲ್ಲಿದ್ದಂತೆ ಎಲ್ಲಾ ವೃಂದದ ಅಂತಿಮ ಜೇಷ್ಠತಾ ಪಟ್ಟಿಗಳನ್ನು ಇಲಾಖಾ ವೆಬ್ ಸೈಟ್‌ಗಳಲ್ಲಿ ಪ್ರಕಟಿಸಲಾಗಿದ್ದು, ದಿನಾಂಕ:01.01.2025 ರಲ್ಲಿದ್ದಂತೆ ಎಲ್ಲಾ ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಿ, ಆಕ್ಷೇಪಣೆ ಸಲ್ಲಿಸಲು ಕ್ರಮವಹಿಸಲಾಗಿರುತ್ತದೆ. ಆಕ್ಷೇಪಣಾ ಅವಧಿ ಮುಗಿದ ನಂತರ ಜೇಷ್ಠತಾ ಪಟ್ಟಿಗಳನ್ನು ಅಂತಿಮಗೊಳಿಸಲಾಗುವುದು. |
| ಈ) | ಸದರಿ ಆದೇಶಗಳ ಅನ್ವಯ ದಿನಾಂಕ:01.01.2025ಕ್ಕೆ ಜೇಷ್ಠತಾ ಪಟ್ಟಿಗಳನ್ನು ಪ್ರಕಟಿಸಲಾಗುವುದೇ; ಜೇಷ್ಠತಾ ಪಟ್ಟಿಗಳನ್ನು ಪ್ರಕಟಿಸದೇ ಇದ್ದಲ್ಲಿ ಕಾರಣಗಳೇನು; ಸಮಯೋಚಿತವಾಗಿ ಮತ್ತು ಸಿಆಸು ಇಲಾಖೆಯ ಆದೇಶ ಮತ್ತು ಸುತ್ತೋಲೆಗಳ ಅನ್ವಯ ಪ್ರಕಟಿಸುವ ಕುರಿತು ಸರ್ಕಾರದ ನಿಲುವೇನು; ದಿನಾಂಕ:01.01.2025ಕ್ಕೆ ಜೇಷ್ಠತಾ ಪಟ್ಟಿಗಳನ್ನು ಪ್ರಕಟಿಸದಿರುವ ಅಧಿಕಾರಿಗಳ ವಿರುದ್ಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಸಂಪೂರ್ಣ ಮಾಹಿತಿ ನೀಡುವುದು) | ಕ್ರಮ ಸಂಖ್ಯೆ: (ಇ) ರ ಹಿನ್ನೆಲೆಯಲ್ಲಿ ಉದ್ಭವವಾಗುವುದಿಲ್ಲ. |

**ಸಂಖ್ಯೆ:**ಇಪಿ 123 ಎಸ್ ಟಿಬಿ 2025

**( ಎಸ್. ಮಧು ಬಂಗಾರಪ್ಪ )**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು.